ಮಂದ್ರಾಸ್ ಬ್ರಾಡ್‌ಗೇಜ್ ರೈಲ್ವೆ ಕೆಳ ಸೇತುವೆ ಮೂಲಕ ಹಾದು ಹೋಗುವ ಪ್ಯಾಲೇಸ್ ರಸ್ತೆಯ ನಿರ್ಮಾಣ

೧೩೪೩. ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರೈಲ್ವೆ ಲೈನಿಗೆ ಸೇರಿದಂತೆ ಇರುವ ಮದ್ರಾಸ್ ಬ್ರಾಡ್‌ಗೇಜ್ ರೈಲ್ವೆ ಕೆಳ ಸೇತುವೆ ಮೂಲಕ ಹಾದು ಹೋಗುವ ಪ್ಯಾಲೇಸ್ ರಸ್ತೆಯ ನಿರ್ಮಾಣದ ಕೆಲಸವನ್ನು ಇಬ್ಬರು ಬೇರೆ ಬೇರೆ ಕಂಟ್ರಾಕ್ಟರ್‌ಗಳಿಗೆ ವಹಿಸಿಕೊಡಲು ಕಾರಣವೇನು ?

(ಆ) ಆ ಇಬ್ಬರು ಕಂಟ್ರಾಕ್ಟರ್‌ಗಳ ಕೆಲಸವನ್ನು ಕ್ರೋಢೀಕರಿಸಿ ಏಕ ಕಾಲದಲ್ಲಿ ಕೆಲಸ ಮಾಡಿಸಲು ತೆಗೆದುಕೊಂಡ ಕ್ರಮಗಳೇನು ?

(ಇ) ಸದರಿ ರಸ್ತೆ ಭೂಸ್ವಾಧೀನಪಡಿಸಿಕೊಳ್ಳುವ ಕೆಲಸವು ಮುಕ್ತಾಯವಾಗಿದೆಯೇ ?

(ಈ) ಪಕ್ಕದ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ತಗಲಿದ ಅಂದಾಜು ಮತ್ತು ಮಂಜೂರಾದ ಮೊತ್ತವೆಷ್ಟು ? ಹಾಗೂ ಭೂಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ವಿಚ್ಚ ವೆಷ್ಟು ? ಮತ್ತು ಯಾವಾಗ ಇದು ಮುಗಿಯುತ್ತದೆ ? (ಮಂಜೂರಾದ ನಕ್ಷೆ ಒದಗಿಸಿ)

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

(ಅ) ಶೀಘ್ರ ಪ್ರಗತಿಯನ್ನು ಸಾಧಿಸುವುದಕ್ಕಾಗಿ

(ಆ) ಎರಡೂ ಕೆಲಸಗಳು ಒಂದಕ್ಕೊಂದು ಸ್ವತಂತ್ರವಾಗಿವೆ.

(ಇ) ಆರಮನೆಯ ರಸ್ತೆ ಹಾಗೂ ವಸಂತನಗರ ಮುಖ್ಯ ರಸ್ತೆಯ ಸಂಬಂಧ ಭೂಸ್ವಾಧೀನ ಪಡಿಸಿಕೊಳ್ಳುವ ಭೂಮಿ ಇರುವುದಿಲ್ಲ. ಆದಾಗ್ಯೂ ಪ್ಯಾಲೇಸ್ ಅಡ್ಡ ರಸ್ತೆಯ ಪಕ್ಕದ ಭೂಸ್ವಾಧೀನವು ಆರಮನೆಯ ಸ್ವಲ್ಪ ಭಾಗದ ಭೂಮಿಯ ಬಗ್ಗೆ ತಕರಾರು ಇರುವುದರಿಂದ ಭೂ ಸ್ವಾಧೀನ ನಡವಳಿಗಳನ್ನು ಸ್ಥಗಿತಗೊಂಡಿದೆ.

(ಈ) ಈ ಯೋಜನೆಗೆ ಮಂಜೂರಾದ ಮೊತ್ತ ೮೨ ಲಕ್ಷಗಳು. ಶ್ರೀಮತಿ ನರಸಮ್ಮನವರಿಗೆ ಸಂಬಂಧಿಸಿದ ಭೂಮಿಯ ಬೆಲೆ ರೂ. ೨.೧೦ ಲಕ್ಷಗಳು. ಆರಮನೆಯ ಭೂಮಿಯ ಭೂಸ್ವಾಧೀನದ ನಿರ್ದಿಷ್ಟ ಮೊತ್ತವನ್ನು ಇನ್ನು ಅಂದಾಜು ಮಾಡಿಲ್ಲ.

ಮಂಜೂರಾದ ನಕ್ಷೆಯು ಬೆಂಗಳೂರು ಮಹಾನಗರಪಾಲಿಕೆಯ ಮುಖ್ಯ ಅಭಿಯಂತರವರ ಕಚೇರಿಯಲ್ಲಿ ಪರಿಶೀಲನೆಗಾಗಿ ದೊರೆಯುತ್ತದೆ.

ಬೆಂಗಳೂರು ಜಲಮಂಡಳಿಯ ವಸತಿ ಗೃಹಗಳು

೧೩೪೭. ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಶಿವಾಜಿನಗರ ಕ್ಷೇತ್ರದಲ್ಲಿ ಬೆಂಗಳೂರು ಜಲಮಂಡಳಿಯ ವಸತಿ ಗೃಹಗಳ ಸಂಖ್ಯೆ

(ಆ) ಈ ಕಟ್ಟಡ ಮತ್ತು ಆವರಣದ ದುರಸ್ಥಿ ನಿರ್ವಹಣ ಕೆಲಸಗಳ ಜವಾಬ್ದಾರಿ ಇರುವ ವ್ಯಕ್ತಿ.

(ಇ) ನಿರ್ವಹಣಾ ದುರಸ್ಥಿ ಕಾರ್ಯಗಳು ಮತ್ತು ಅನಿರ್ಬಂಧಿತ ಜಲಪೂರೈಕೆ, ವಿದ್ಯುಚ್ಚಕ್ತಿ ಪೂರೈಕೆ, ನಿರ್ಮಲೀಕರಣ ವ್ಯವಸ್ಥೆ ಮತ್ತು ಕ್ರೀಡಾ ಸಂಸ್ಕೃತಿ ಮತ್ತು ವಿನೋದಾವಳಿ ಚಟುವಟಿಕೆಗಳಿಗೆ ಸಂಬಂಧದಲ್ಲಿ ನಡೆಸಿರುವ ಪರಿವೀಕ್ಷಣೆಗಳು ಮತ್ತು ಅವುಗಳ ಹಂತ.

ಶ್ರೀ ವೀರೇಂದ್ರಪಾಟೀಲ್ (ಮುಖ್ಯಮಂತ್ರಿಗಳು).—

(ಅ) ಹದಿನೆಂಟು

(ಆ) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಂ. ೨ ಮತ್ತು ನಂ. ೩ ನೀರು ಸರಬರಾಜು ಉಪ-ವಿಭಾಗ